ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾಡುವಾಗ ಇಲ್ಲದೆ ಇದ್ದದ್ದು ಏಕೆ ಈಗ ಆ ಫಾರೆಸ್ಟ್‌ನವರು ನಮ್ಮದು ಎಂದು ಕ್ಲೇಮ್ ಮಾಡುತ್ತಿದ್ದಾರೆನ್ನುವುದರ ಬಗ್ಗೆ ಅದನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ಅಥವಾ ಸರ್ಕಾರದ ಮಟ್ಟದಲ್ಲಿ ಬಗೆಹರಿಸಿ ಅಲ್ಲಿ ಕೈಗಾರಿಕೆ ವಸಾಹತು ಸ್ಥಾಪನೆ ಮಾಡುವುದಕ್ಕೆ ಕ್ರಮ ವಹಿಸುತ್ತೇವೆ.

ಶ್ರೀ ಡಿ.ಎನ್. ಜೀವರಾಜ್: ಮಂತ್ರಿಗಳು ಆದೇಶ ಕೊಟ್ಟರೆ ಅದು ಆಗುತ್ತದೆ.

4. **ವಿಷಯ:** ಹಾಸನ ಜಿಲ್ಲೆ ಆಲೂರು ಮತ್ತು ಸಕಲೇಶಪುರ ತಾಲ್ಲೂಕು ಕೇಂದ್ರಗಳಲ್ಲಿರುವ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹಾಗೂ ಕಿರಿಯ ಕಾಲೇಜಿನ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ ನೀಡುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ಹಾಸನ ಜಿಲ್ಲೆ ಆಲೂರು ಮತ್ತು ಸಕಲೇಶಪುರ ತಾಲ್ಲೂಕು ಕೇಂದ್ರಗಳಲ್ಲಿರುವ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹಾಗೂ ಕಿರಿಯ ಕಾಲೇಜಿನ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ ನೀಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಕ್ಕರೆ ಮತ್ತು ಸಹಕಾರ ಸಚಿವರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಪರವಾಗಿ): ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲೂರು, ಹಾಸನ ಜಿಲ್ಲೆ ಇಲ್ಲಿ ಹಾಲಿ 2015–16ನೇ ಸಾಲಿನಲ್ಲಿ ಒಟ್ಟು 162 ವಿದ್ಯಾರ್ಥಿನಿಯರು ದಾಖಲಾಗಿರುತ್ತಾರೆ. ಸದರಿ ಕಾಲೇಜಿನಲ್ಲಿ ಸ್ಥಳೀಯವಾಗಿ ಲಭ್ಯವಿರುವ ಪ್ರೌಢಶಾಲಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲೂರು, ಹಾಸನ ಜಿಲ್ಲೆ ಇಲ್ಲಿ ಈ ಶೈಕ್ಷಣಿಕ ಸಾಲಿನಲ್ಲಿ 763 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಸದರಿ ಕಾಲೇಜಿಗೆ 12 ಕೊಠಡಿಗಳನ್ನು ವಿವಿಧ ಯೋಜನೆಯಡಿ ನಿರ್ಮಿಸಲಾಗಿರುತ್ತದೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸಕಲೇಶಪುರ, ಹಾಸನ ಜಿಲ್ಲೆ ಇಲ್ಲಿ 2015–16ನೇ ಸಾಲಿನಲ್ಲಿ ಒಟ್ಟು 93 ವಿದ್ಯಾರ್ಥಿನಿಯರು ದಾಖಲಾಗಿರುತ್ತಾರೆ. ಈ ಕಾಲೇಜು ಸ್ಥಳೀಯವಾಗಿ ಲಭ್ಯವಿರುವ ಪ್ರೌಢಶಾಲೆಯ ಕಟ್ಟಡವನ್ನು ಉಪಯೋಗಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು, ಸಕಲೇಶಪುರ, ಹಾಸನ ಜಿಲ್ಲೆ ಇಲ್ಲಿಗೆ 2015–16ನೇ ಸಾಲಿನಲ್ಲಿ ಒಟ್ಟು 529 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಈ ಕಾಲೇಜಿಗೆ 13 ಕೊಠಡಿಗಳುಳ್ಳ ಕಟ್ಟಡವನ್ನು ನಿರ್ಮಿಸಲಾಗಿದೆ.

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಆಲೂರು ಹಾಗೂ ಸಕಲೇಶಪುರ ಇಲ್ಲಿಗೆ ಪ್ರತ್ಯೇಕವಾದಂತಹ ಕಟ್ಟಡದ ಅವಶ್ಯಕತೆ ಇರುವುದನ್ನು ಸರ್ಕಾರ ಮನಗಂಡಿದ್ದು, ಅನುದಾನದ ಲಭ್ಯತೆ ಆಧಾರ ಕ್ರಮ ವಹಿಸಲಾಗುವುದು.

ಹಾಲಿ ಕಟ್ಟಡವನ್ನು ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು, ಸಕಲೇಶಪುರ ಮತ್ತು ಆಲೂರು ಈ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ರಿಪೇರಿಯ ಅವಶ್ಯಕತೆ ಮತ್ತು ಹೆಚ್ಚುವರಿ ಕೊಠಡಿಗಳ ಅವಶ್ಯಕತೆ ಇರುವುದನ್ನು ಮನಗಂಡಿದ್ದು, ಆರ್.ಐ.ಡಿ.ಎಫ್–20ರ ಯೋಜನೆಯಡಿಯಲ್ಲಿ ₹. 30.00 ಲಕ್ಷಗಳ ಅಂದಾಜಿನಲ್ಲಿ ಎರಡು ಕೊಠಡಿ ಮತ್ತು ನಾಲ್ಕು ಶೌಚಾಲಯಗಳನ್ನು ನಿರ್ಮಿಸಲು ಅನುಮೋದನೆ ನೀಡಿದೆ. ಉಳಿದಂತೆ ಅನುದಾನದ ಲಭ್ಯತೆ ಆಧಾರ ಕ್ರಮ ವಹಿಸಲಾಗುವುದು.

ಸಕಲೇಶಪುರ ತಾಲ್ಲೂಕು ಕೇಂದ್ರದಲ್ಲಿ 3 ಪ್ರಾಥಮಿಕ ಶಾಲೆಗಳು ಹಾಗೂ ಆಲೂರು ತಾಲ್ಲೂಕು ಕೇಂದ್ರದಲ್ಲಿ 2 ಪ್ರಾಥಮಿಕ ಶಾಲೆಗಳಿದ್ದು, ಸಕಲೇಶಪುರ ತಾಲ್ಲೂಕು ಕೇಂದ್ರದಲ್ಲಿ 2 ಸರ್ಕಾರಿ ಪದವಿ ಪೂರ್ವಕಾಲೇಜು (ಪ್ರೌಢ ಶಾಲಾ ವಿಭಾಗ), ಆಲೂರು ತಾಲ್ಲೂಕು ಕೇಂದ್ರದಲ್ಲಿ 2 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿದ್ದು (ಪ್ರೌಢ ಶಾಲಾ ವಿಭಾಗ) ಇದ್ದು, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಅನುದಾನದ ಲಭ್ಯತೆ ಆಧಾರ ಕ್ರಮ ವಹಿಸಲಾಗುವುದು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಆಲೂರು ಮತ್ತು ಸಕಲೇಶಪುರ ತಾಲ್ಲೂಕು ಕೇಂದ್ರಗಳಲ್ಲಿರುವ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಹಾಗೂ ಕಿರಿಯ ಕಾಲೇಜಿನ ಕಟ್ಟಡಗಳು ತುಂಬಾ ಹಳೆಯದಾಗಿದ್ದು ಶಿಥಿಲಾವಸ್ಥೆಯಲ್ಲಿರುತ್ತವೆ. ದಯಮಾಡಿ ಅವುಗಳ ಕಟ್ಟಡಗಳನ್ನು ನೂತನವಾಗಿ ನಿರ್ಮಾಣ ಮಾಡುವುದಕ್ಕೆ ಅನುದಾನ ಬಿಡುಗಡೆ ಮಾಡಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ. ಅನುದಾನ ಲಭ್ಯತೆ ಎನ್ನುವ ಮಾಮೂಲಿ ಉತ್ತರ ಬಂದಿದೆ. 30 ಲಕ್ಷ ರೂ.ಗಳನ್ನು ಕೊಟ್ಟಿರುತ್ತೀರಿ, ಅದು ಯಾವ ಮೂಲೆಗೆ ಸಾಲುವುದಿಲ್ಲ. ಅಲ್ಲಿ ಕೆಲವು ಕಟ್ಟಡಗಳು ನಿರ್ಮಾಣವಾಗಿ 100 ವರ್ಷಗಳಾಗಿವೆ. ಅದು ಮಲೆನಾಡು ಪ್ರದೇಶ ಇದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಮತ್ತು ಸಕ್ಕರೆ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಅದು ಕೇವಲ ಸಕಲೇಶಪುರ ಕ್ಷೇತ್ರದಲ್ಲಿ ಅಷ್ಟೇ ಅಲ್ಲ, ಕಟ್ಟಡಗಳ ಅವಶ್ಯಕತೆ ಇರುವ ಎಲ್ಲಾ ಕಡೆ ಈ RIDF ನಿಂದ 50, 30 20 ಲಕ್ಷ ರೂ.ಗಳನ್ನು ಈ ರೀತಿ ಹಣ ಹಂಚಿಕೆ ಮಾಡಿದೆ. ಇವರ ಕ್ಷೇತ್ರಕ್ಕೂ ಏನು ಕೊರತೆ ಮಾಡಿಲ್ಲ, 30 ಲಕ್ಷ ರೂ.ಗಳು ಬಂದಿದೆ. ಅವಶ್ಯಕತೆ ಇರುವುದು ವಾಸ್ತವಾಂಶ ಇದ್ದರೂ ಕೂಡ ಮಲೆನಾಡಿನಲ್ಲಿ ಬೇಗ ಶಿಥಿಲಗೊಳ್ಳುವ ಸಾಧ್ಯತೆ ಜಾಸ್ತಿ ಇರುತ್ತದೆ. ಆದ್ದರಿಂದ ಸ್ವಲ್ಪ ಹೆಚ್ಚಿನ ಆದ್ಯತೆ ಕೊಡಬೇಕು. ಮುಂದಿನ ಸಾಲಿನಲ್ಲಿ ಅದಕ್ಕೆ ಸ್ವಲ್ಪ ಹೆಚ್ಚಿನ ಹಣ ಕೊಡುತ್ತೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಆದ್ಯತೆ ಮೇಲೆ ಅನುದಾನವನ್ನು ಬಿಡುಗಡೆ ಮಾಡಿ ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಆಯಿತು.